ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ತಾರತಮ್ಯದ ಪ್ರಶ್ನೆಯಿಲ್ಲ.

ಒಬ್ಬ ಮಾನ್ಯ ಸದಸ್ಯರು,—ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳಬೇಕೆಂದು ಉಪಾಧ್ಯಕ್ಷರು ಈಗಾಗಲೇ ಅಪ್ಪಣೆ ಕೊಟ್ಟು ಆಗಿದೆ. ಆದ್ದರಿಂದ ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ,—ಮಾನ್ಯ ಅಧ್ಯಕ್ಷರೇ ತಮ್ಮ ಮುಖೇನ ನಾನು ಇವತ್ತು ಸನ್ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುವುದೇನೆಂದರೆ, ಇವತ್ತು ಈ ರಾಜ್ಯದಲ್ಲಿ ಯಾವುಬೇ ಬಿಂದುಳಿದ ಭಾಗದಲ್ಲಿ ಚಳುವಳಿ ಮಾಡುವಂತಹ ವಿಚಾರಕ್ಕೆ ಎಡೆಕೊಡುವ ಪ್ರಶ್ನೆ ನಮ್ಮಮುಂದೆ ಇಲ್ಲ. ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಚಿವರು ಉತ್ತರ ಕೊಡುವಾಗ ಈ ರೀತಿಯು ಹಾರಿಕೆಯ ಉತ್ತರ ಕೊಟ್ಟರೆ ಹೇಗೆ? ಇದರ ಬಗ್ಗೆ ಪುನಃ ಆಲೋಚನೆ ಮಾಡಿ, ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ನಿಮ್ಮ ಪಕ್ಷದ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಿ. ಪ್ರಾದೇಶಿಕ ಅಸಮಾನತೆಯ ಬಗ್ಗೆ ನೀವು ಯಾವುದೇ ರೀತಿಯ ಚರ್ಚೆ ಮಾಡದೆ ಈ ಒಂದು ನೀತಿಯನ್ನು ರೂಪಿಸಿದರೆ ಹೇಗೆ?

(ಉತ್ತರ ಇಲ್ಲ)

ಉಪಾಧ್ಯಕ್ಷರು.—೨೫ ಮತ್ತು ೨೬ನೇ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಆರೋಗ್ಯ ಸಚಿವರು ಇಲ್ಲದೇ ಇರುವುದರಿಂದ ಈ ಪ್ರಶ್ನೆಗಳನ್ನು ಮುಂದೂಡಲಾಗಿದೆ.

ವಿಷಯ,- ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಸದಸ್ಯರನ್ನು ನೇಮಕ ಮಾಡುವ ವಿಚಾರ

೨೭ ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ)—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಗೆಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

ಅ) ಲೋಕ ಸೇವಾ ಆಯೋಗದಲ್ಲಿ ಎಷ್ಟು ಜನ ಸದಸ್ಯರನ್ನು ತುಂಬಬೇಕಾಗಿದೆ.

ಆ) ಆ ಸ್ಥಳಗಳನ್ನು ಯಾವಾಗ ತುಂಬಲಾಗುವುದು.

ಇ) ನೇಮಿಸುವಾಗ ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯ ನೀಡಲಾಗುವುದೇ?

ಶ್ರೀ ರಾಮಕೃಷ್ಣ ಪೆಡ್ಡಿ (ಮುಖ್ಯ ಮಂತ್ರಿಗಳು)—.

ಅ) ಇಬ್ಬರು ಸದಸ್ಯರನ್ನು ನೇಮಕ ಮಾಡಬೇಕಾಗಿದೆ.

ಆ) ಆ ಸ್ಥಳಗಳನ್ನು ತುಂಬಲು ಸರ್ಕಾರವು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು.

ಇ) ಅರ್ಹರಾದ ವ್ಯಕ್ತಿಗಳನ್ನು ಜಿಲ್ಲೆ ಅಥವಾ ಪ್ರಾದೇಶಿಕ ಭೇದವಿಲ್ಲದೆ ನೇಮಕ ಮಾಡಲಾಗುವುದು.

ಶ್ರೀ ಎಚ್. ಡಿ. ದೇವೇಗೌಡ.—ಉತ್ತರವನ್ನು ಸನ್ಮಾನ್ಯ ಸದಸ್ಯರಿಗೆ ಕೊಡಲಾಗಿದೆ ಎಂದು ನಾನು ಭಾವಿಸಿ, ಲೋಕ ಸೇವಾ ಆಯೋಗದಲ್ಲಿ ಖಾಲಿ ಇರುವ ಇಬ್ಬರು ಸದಸ್ಯರನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದಷ್ಟು ಶೀಘ್ರವಾಗಿ ಆ ಎರಡು ಸದಸ್ಯರನ್ನು ಖಾಲಿ ಇರತಕ್ಕಂತಹ ಜಾಗಕ್ಕೆ ಭರ್ತಿಮಾಡಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇರತಕ್ಕಂತಹ ಒಟ್ಟು ಸದಸ್ಯರ ಸಂಖ್ಯೆ ಎಷ್ಟು? ಮತ್ತೆ ಖಾಲಿ ಇರತಕ್ಕಂತಹ ಎರಡು ಜಾಗಗಳಿಗೆ ಇಬ್ಬರು ಸದಸ್ಯರನ್ನು ಯಾವಾಗ ಭರ್ತಿ ಮಾಡಲಾಗುವುದು? ನಿರ್ದಿಷ್ಟ ದಿನವನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?

ಶ್ರೀ ಎಚ್. ಡಿ. ದೇವೇಗೌಡ.—ಲೋಕಸೇವಾ ಆಯೋಗದಲ್ಲಿರತಕ್ಕಂತಹ ಒಟ್ಟು ಸದಸ್ಯರ ಸಂಖ್ಯೆ ೭. ಇವರಲ್ಲಿ ಇಬ್ಬರು ಜನರಿದ್ದಾರೆ. ೨ ಸದಸ್ಯರ ಸ್ಥಾನ ಖಾಲಿ ಇವೆ. ಒಂದು ೧೧–೮–೮೧ ರಿಂದ ಖಾಲಿ ಇದೆ. ಮತ್ತೊಂದು ೧೪–೨–೧೯೮೨ ರಿಂದ ಖಾಲಿ ಬಿದ್ದಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇವುಗಳನ್ನು ಯಾವಾಗ ತುಂಬುತ್ತೀರಿ ? ಎರಡು ತಿಂಗಳಲ್ಲೋ ಅಥವಾ ಮೂರು ತಿಂಗಳಲ್ಲೋ ?

ಶ್ರೀ ಎಚ್. ಡಿ. ದೇವೇಗೌಡ.—ಆದಷ್ಟು ಶೀಘ್ರ ಕಾಲದಲ್ಲಿ ಇವುಗಳನ್ನು ಭರ್ತಿ ಮಾಡ ಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ —ಶೀಘ್ರ ಅಂದರೆ ೨ ತಿಂಗಳಲ್ಲೇ?

ಶ್ರೀ ಎಚ್. ಡಿ. ದೇವೇಗೌಡ.—ಖಾಲಿ ಬಿದ್ದ ೨ ವರ್ಷಗಳಾಗಿವೆ. ಆದಷ್ಟು ಶೀಘ್ರ ಅಂದರೆ ಬಹಳಷ್ಟು ಕಡಿಮೆ ಕಾಲದಲ್ಲಿ ಭರ್ತಿ ಮಾಡಲಾಗುವುದು.

ಶ್ರೀ ಬಿ. ಶಿವಣ್ಣ.—ಉತ್ತರ ಕರ್ನಾಟಕದ ಬಗ್ಗೆ ಗಮನದಲ್ಲಿಟ್ಟುಕೊಂಡು ಈ ಸ್ಥಾನಗಳನ್ನು ಭರ್ತಿ ಮಾಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ —ಉತ್ತರ ಕರ್ನಾಟಕದ ಬಗ್ಗೆಯೂ ಗಮನದಲ್ಲಿಟ್ಟುಕೊಂಡು ಸರ್ಕಾರ ತೀರ್ಮಾನ ಮಾಡುತ್ತದೆ. ಅದೇ ರೀತಿ ಹೈದರಾಬಾದ್ ಕರ್ನಾಟಕದ ಬಗ್ಗೆಯೂ ಗಮನ ದಲ್ಲಿಟ್ಟುಕೊಂಡು ಸರ್ಕಾರ ತೀರ್ಮಾನ ಮಾಡುತ್ತದೆ.

ದಾವಣಗೆರೆಯಲ್ಲಿ ಕ್ರೀಡಾಂಗಣ ಕಟ್ಟುವ ಬಗ್ಗೆ

೨೮. ಶ್ರಿಪಂಪಾಪತಿ (ದಾವಣಗೆರೆ).—ಮಾನ್ಯ ಯುವ ಜನ ಸೇವಾ ರಾಜ್ಯ ಮಂತ್ರಿಯವರು ದಯೆಯಿಟ್ಟು ಈ ಕೆಳಗೆಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ದಾವಣಗೆರೆಯಲ್ಲಿ ಕ್ರೀಡಾಂಗಣ ಕಟ್ಟಲಾಗಿದೆಯೆ ?

(ಆ) ಇಲ್ಲದಿದ್ದರೆ, ಈ ಬಗ್ಗೆ ಸರ್ಕಾರದ ಮುಂದೆ ಯೋಜನೆ ಇದೆಯೇ ?

ಶ್ರೀ ಜೀವರಾಜ ಆಳ್ವ (ಯುವಜನ ಸೇವಾ ರಾಜ್ಯ ಸಚಿವರು)

(ಅ) ಇಲ್ಲಾ

(ಆ) ಯೋಜನೆ ಇದೆ. ಸರ್ಕಾರದ ನೀತಿಯಂತೆ ಜಿಲ್ಲಾ ಮಟ್ಟದ ಕ್ರೀಡಾಂಗಣ ಮೊದಲು ಮುಗಿಸಬೇಕಾಗಿದೆ. ಹಣದ ಮುಗಟ್ಟಿನಿಂದ ತಾಲ್ಲೂಕು ಮಟ್ಟದ ಕ್ರೀಡಾಂಗಣ ಕಟ್ಟಲು ಸಾಧ್ಯ ವಾಗುವುದಿಲ್ಲ

ಶ್ರೀ ಪಂಪಾಪತಿ.—ಸರ್ಕಾರ ತೆಗೆದುಕೊಂಡಿರತಕ್ಕಂತಹ ನೀತಿಯ ಪ್ರಕಾರ ಜಿಲ್ಲಾ ಮಟ್ಟದ ಕ್ರೀಡಾಂಗಣವನ್ನು ಮೊದಲು ಮಾಡಬೇಕೆಂಬುದನ್ನು ಒಪ್ಪುವುದಾದರೂ, ನಮ್ಮ ದಾವಣಗೆರೆ ನಗರ ಇಡೀ ರಾಜ್ಯದಲ್ಲಿರುವ ದೊಡ್ಡ ಪಟ್ಟಣಗಳಲ್ಲಿ ಳನೇಯದಾಗಿದೆ. ಅಲ್ಲಿರತಕ್ಕಂತಹ ವಿದ್ಯಾರ್ಥಿಗಳ ಸಂಖ್ಯೆ, ಯುವಕರ ಸಂಖ್ಯೆ, ಜನಸಂಖ್ಯೆ ಇವೆಲ್ಲವನ್ನೂ ಹೋಲಿಕೆ ಮಾಡುವುದಾದರೆ. ದಾವಣಗೆರೆ ನಗರ ಜಿಲ್ಲೆಗಿಂತೆ ದೊಡ್ಡ ನಗರವಾಗಿದೆ. ಆಗತ್ಯ ಇರುವಂತಹ ಕಡೆ ಆದಷ್ಟು ಜಾಗ್ರತೆ ಕ್ರೀಡಾಂಗಣ ವನ್ನು ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ನಿಮ್ಮ ನೀತಿಯ ಪ್ರಕಾರ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮೊದಲು ಕ್ರೀಡಾಂಗಣವನ್ನು ಮಾಡಿ, ನಂತರ ದಾವಣಗೆರೆಯಲ್ಲಿ ಕ್ರೀಡಾಂಗಣವನ್ನು ಮಾಡುವುದಾದರೆ ಅಲ್ಲಿಯ ಜನ ರೊಚ್ಚಿಗೆದ್ದಾರು, ಆದ್ದರಿಂದ ಸರ್ಕಾರ ಇದನ್ನು ಆರ್ಥಮಾಡಿಕೊಂಡು ಕೂಡಲೇ ದಾವಣಗೆರೆಗೆ ಕ್ರೀಡಾಂಗಣವನ್ನು ನಿರ್ಮಾಣ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—೧೯ ಜಿಲ್ಲಾ ಕೇಂದ್ರಗಳಲ್ಲೂ ಕ್ರೀಡಾಂಗಣ ನಿರ್ಮಾಣದ ಕೆಲಸ ವಿವಿಧ ಹಂತದಲ್ಲಿದೆ. ದಾವಣಗೆರೆಯಲ್ಲೂ ಕ್ರೀಡಾಂಗಣವನ್ನು ಮಾಡುವುದಕ್ಕೆ ೫ ಲಕ್ಷದ ೭ ಸಾವಿರ ರೂಪಾಯಿಗಳಿಗೆ ಅಲ್ಲಿರತಕ್ಕಂತಹ ಯುವಜನ ಅಧಿಕಾರಿಯವರು ಅಂದಾಜನ್ನು ಕಳುಹಿಸಿದ್ದಾರೆ. ಆದರೆ ಅದು ಇನ್ನೂ ಒಪ್ಪಿಗೆಯಾಗಿ ಸಹಿಯಾಗಿಲ್ಲ. ಆದರ ಬ್ಲೂ ಪ್ರಿಂಟ್ ಲೋಕೋಪಯೋಗಿ ಇಲಾಖೆಗೆ ಒಪ್ಪಿಗೆಗಾಗಿ ಕಳುಹಿಸಲಾಗಿದೆ. ಅಲ್ಲಿಂದ ಅದು ಇದುವರೆವಿಗೂ ಬಂದಿಲ್ಲ. ಮಾನ್ಯ ಸದಸ್ಯರು ಅದನ್ನು ಪುನಃ ಕಳುಹಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.